**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ ಬೇಲೂರು.**

**ಸಿಸಿಃ 289/2018**

| | | |
|---|---|---|
| **ಹೆಸರು** | ಪುನೀತ್ ಯು ಆರ್ | **ದಿಃ 11-08-2023** |
| **ತಂದೆ ಹೆಸರು** | ರವಿಕುಮಾರ್ | |
| **ವಯಸ್ಸು** | **35 ವರ್ಷ** | **ಪಿಡಬ್ಲ್ಯೂಃ 2** |
| **ಉದ್ಯೋಗ** | **ಪೊಲೀಸ್ ಪೇದೆ ,** ಪೆನ್ ಷನ್ ಮೊಹಲ್ಲಾ ಪೊಲೀಸ್ ಠಾಣೆ | **ಸಿಡಬ್ಲ್ಯೂಃ 2** |
| **ವಾಸ** | ಹಾಸನ | **ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು** |

**ಮುಖ್ಯ ವಿಚಾರಣೆ ಃ ಮಾನ್ಯ** ಸಾಹಯಕ ಸರ್ಕಾರಿ ಅಭಿಯೋಜಕರಿಂದ

**ನಾನು 2017** ನೇ ಇಸವಿಯಿಂದ **2022** ನೇ ಇಸವಿಯವರೆಗು ಹಳೇಬೀಡು **ಪೋಲೀಸ್ ಠಾಣೆ**ಯಲ್ಲಿ **ಪೊಲೀಸ್ ಪೇದೆ**ಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ **04-04-2018** ರಂದು ಸಂಜೆ **4** ಗಂಟೆ ಸಮಯದಲ್ಲಿ ಚಾಸಾ **1** ರವರು ನನ್ನನ್ನು ಮತ್ತು ಚಾಸಾ**-3** ರವರನ್ನು ಠಾಣೆಯಲ್ಲಿರುವಾಗ ಕರೆದು ದಾಳಿಗೆ ಹೋಗಬೇಕಾಗಿ ತಿಳಿಸಿರುತ್ತಾರೆ. ನಾವು **4.10** ಕ್ಕೆ ಠಾಣೆಯಿಂದ ಹೊರೆಟು ಹಳೇಬೀಡು ಹೋ. ಶಿವನೇನಹಳ್ಳಿ ದೊಮ್ಮರಟ್ಟಿ ಗ್ರಾಮಕ್ಕೆ ತೆರಳಿ ಪಂಚರಾದ ಚಾಸಾ**-4** ರಿಂದ **6** ರವರಿಗೆ ದಾಳಿ ಮಾಡುವ ವಿಷಯ ತಿಳಿಸಿ ಪಂಚರಾಗಿ ಸಹಕರಿಸಲು ಕೋರಿದ ಮೇರೆಗೆ ಅವರು ಒಪ್ಪಿ ನಮ್ಮ ಜೊತೆ ಬಂದಿರುತ್ತಾರೆ. ಸಂಜೆ **4ಃ45** ಗಂಟೆಗೆ ಆರೋಪಿ ರವಿ ಬಿನ್ ನಂಜಯ್ಯ ರವರ ಮನೆಯ ಬಳಿ ಹೋಗಿ ನೋಡಲಾಗಿ ಸದರಿ ವ್ಯಕ್ತಿ ಮನೆಯ ಮುಂದೆ ಜಗುಲಿಯ ಮೇಲೆ ಒಂದು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ನಲ್ಲಿ ಅಕ್ರಮವಾಗಿ ಮದ್ಯ ಇಟ್ಟುಕೊಂಡಿರುವುದು ಕಂಡು ಬಂದಿರುತ್ತದೆ. ಕೂಡಲೇ ಚಾಸಾ**-1** ರವರು ಆತನನ್ನು ಹಿಡಿದು ಹೆಸರು ವಿಳಾಸ ಕೇಳಲಾಗಿ ರವಿ ಬಿನ್ ನಂಜಯ್ಯ ಎಂದು ತಿಳಿಸಿರುತ್ತಾನೆ. ಪಂಚರ ಸಮಕ್ಷಮ ಆತನ ಬಳಿ ಇದ್ದ ಮದ್ಯವನ್ನು ಪರಿಶೀಲನೆ ಮಾಡಿದಾಗ **180** ಎಂ ಎಲ್ ನ ಓಲ್ಡ್ ಟವರಿನ್ ವಿಸ್ಕಿಯ ಒಟ್ಟು **5** ಸ್ಯಾಚೇಟ್ ಗಳು, **90** ಎಂ ಎಲ್ ನ ರಾಜಾ ವಿಸ್ಕಿಯ **10** ಸ್ಯಾಚಿಟ್ ಗಳು, **90** ಎಂ ಎಲ್ ನ ಅಮೃತ್ ಸಿಲ್ವರ್ ಬ್ರಾಂಡಿ ಯ **10** ಸ್ಯಾಚೇಟ್ ಗಳು ಇದ್ದು ಅವುಗಳನ್ನು ಪಂಚರ ಸಮಕ್ಷಮ ಸಂಜೆ **5ಃ00** ರಿಂದ **5ಃ45** ವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡು ಅವುಗಳಲ್ಲಿ ಎಫ್ ಎಸ್ ಎಲ್ ಗೆಂದು ತಲಾ ಒಂದೊಂದು ಸ್ಯಾಚಿಟ್ ತೆಗೆದು ಅದಕ್ಕೆ ಬಟ್ಟೆ ಕಟ್ಟಿ ದಾರ ಸುತ್ತಿ ಇಲಾಖಾ ಮೊಹರು ಮಾಡಿ

ಅಮಾನತ್ತುಪಡಿಸಿಕೊಳ್ಳಲಾಯಿತು. ನಂತರ ಆರೋಪಿ ಮತ್ತು ಸ್ವತ್ತಿನೊಂದಿಗೆ ಸಂಜೆ **6:15** ಕ್ಕೆ ಠಾಣೆಗೆ ಬಂದು ಚಾಸಾ-**10** ರವರಿಗೆ ನಾನು ನನ್ನ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ಕೃತ್ಯ ಸ್ಥಳದ ಅಮಾನತ್ತು ಮಹಜರ್ ನೋಡಿದ್ದು ಅದನ್ನು ಈಗಾಗಲೇ ನಿಪಿ-**2** ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-**2**(ಬಿ) ಎಂದು ನಿಶಾನೆಗೊಳಪಡಿಸಲಾಯಿತು.

ಸಾಕ್ಷಿಯು ಅಮಾನತ್ತು ಪಡಿಸಿಕೊಂಡ ಸ್ಯಾಚೆಟ್ ಗಳನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ಈಗಾಗಲೇ ಮು.ಮಾ-**1** ರಿಂದ **3** ಎಂದು ನಿಶಾನೆಗೊಳಪಡಿಸಲಾಗಿದೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಈ ದಿನ ಆರೋಪಿ ಗೈರು ಹಾಜರು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ಆರ್ ರವರಿಂದಃ**

ಚಾಸಾ-**1** ರವರಿಗೆ ಮಾಹಿತಿ ಬಂದಾಗ ಸಮಯ **400** ಗಂಟೆ ಆಗಿತ್ತು. ಆಗ ನಾನು ಠಾಣೆಯಲ್ಲಿ ಇದ್ದೆನು. ನಾನು ಠಾಣೆಯನ್ನು ಬಿಟ್ಟಾಗ **4:10** ಆಗಿತ್ತು. ನಾವು ಶಿವನೇನಹಳ್ಳಿ ಗ್ರಾಮಕ್ಕೆ ಮಾಯಾಗೊಂಡನಹಳ್ಳಿ, ಕೊಂಡ್ಲಿ ಗ್ರಾಮದ ಮೂಲಕ ಹೋಗಿರುತ್ತೇನೆ. ಶಿವನೇನಹಳ್ಳಿ ಮತ್ತು ದಮ್ಮರಹಟ್ಟಿ ಇವು ಅಕ್ಕಪಕ್ಕದ ಗ್ರಾಮಗಳು. ಆರೋಪಿ ದೊಮ್ಮರಟ್ಟಿ ಗ್ರಾಮಕ್ಕೆ ಸೇರಿದವರು. ಪಂಚರು ದೊಮ್ಮರಟ್ಟಿ ಗ್ರಾಮದವರು. ಪಂಚರು ದೊಮ್ಮರಟ್ಟಿ ಬಸ್ ನಿಲ್ದಾಣದಲ್ಲಿ ನಿಂತಿದ್ದರು. ಸದರಿ ಪಂಚರನ್ನು ಚಾಸಾ-**1** ರವರು ಕರೆದುಕೊಂಡು ಬಂದರು. ನಾವು ಕೆಎ-**13**-ಜಿ-**668** ವಾಹನದಲ್ಲಿ ಹೋದೆವು. ವಾಹನವನ್ನು ನಾವು ಆರೋಪಿಯ ಮನೆಯ ಹತ್ತಿರ ನಿಲ್ಲಿಸಿದ್ದೆವು. ವಾಹನ ನಿಲ್ಲಿಸಿದ ಸ್ಥಳದಿಂದ ಆರೋಪಿಯ ಮನೆಗೆ ಸುಮಾರು **100** ಮೀ ಅಂತರ ಇರುತ್ತದೆ. ಆರೋಪಿಯ ಮನೆ ಬಳಿ ಬೇರೆ ವ್ಯಕ್ತಿಗಳು ಇರಲಿಲ್ಲ.

**2.**ಃ ವಿಸ್ಕಿ ಮತ್ತು ಬ್ರಾಂಡಿಯ ಸ್ಯಾಚೇಟ್ ಗಳನ್ನು ಬೇರೆ ಬೇರೆ ಪ್ಲಾಸ್ಟಿಕ್ ಕವರ್ ನಲ್ಲಿ ಸಂಗ್ರಹಿಸಿ ಇಟ್ಟಿದ್ದರು. ನಾವು ಪ್ಲಾಸ್ಟಿಕ್ ಕವರ್ ಸಮೇತ ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಪ್ಲಾಸ್ಟಿಕ್ ಕವರ್ ಈ ದಿನ ನ್ಯಾಯಾಲಯದಲ್ಲಿ ಇರುವುದಿಲ್ಲ. ಪಂಚರಿಂದ ಮಹಜರ್ ಗೆ ಮತ್ತು ಸ್ಯಾಚಿಟ್ ಮೇಲೆ ಸಹಿಗಳನ್ನು ಮಾಡಿರುತ್ತಾರೆ. ಪಂಚರು ಯಾವ ಭಾಷೆಯಲ್ಲಿ ಸಹಿ ಮಾಡಿರುತ್ತಾರೆ ಎಂದು ನೆನಪಿಲ್ಲ. ಮುಮಾ-**1** ರಿಂದ **3** ರ ಮೇಲಿನ ಸಹಿ ಈ ಮೊಕದ್ದಮೆಗೆ ಸಂಬಂಧಿಸಿದ ಸಹಿ ಅಲ್ಲ ಅಂದರೆ ನೆನಪಿಲ್ಲ. ಮು.ಮಾ-**1** ರಿಂದ **3** ರ ಮೇಲೆ ಪ್ರಕರಣದ ಸಂಖ್ಯೆ **116** ಎಂದು ಬರೆದಿದ್ದು

ಅದು ಯಾವ ಇಸವಿ ಎಂದು ನಮೂದು ಮಾಡಿರುವುದಿಲ್ಲ. ಈ ರೀತಿ ಇಸವಿ ನಮೂದು ಮಾಡದೇ ಇರುವ ಕಾರಣ ಅದು ಈ ಕೇಸಿಗೆ ಸಂಬಂಧಿಸಿದ್ದಲ್ಲ ಎಂದರೆ ಸರಿಯಲ್ಲ. ನಾವು ವರದಿ ಮತ್ತು ಮಹಜರ್ ನ್ನು ಎಸ್ ಹೆಚ್ ಒ ಆಗಿದ್ದ ಎ ಎಸ್ ಐ ಗೋವಿಂದಪ್ಪ ರವರಿಗೆ ಸಲ್ಲಿಸಿರುತ್ತೇವೆ. ನಾವು ಅಮಾನತ್ತುಪಡಿಸಿಕೊಂಡ ಸ್ವತ್ತುಗಳಿಗೆ ಮೊಕದ್ದಮೆ ನಂ. ನ್ನು ನೀಡಿರುವುದಿಲ್ಲ. ನಾವು ಮು.ಮಾ-**1** ರಿಂದ **3** ಕ್ಕೆ ಚೀಟಿಗಳನ್ನು ಮಹಜರ್ ಸಮಯದಲ್ಲೆ ಅಂಟಿಸಲಾಗಿರುತ್ತದೆ. ನಾವು ದಾಳಿ ಮಾಡಿದ ಸಮಯದಲ್ಲಿ ಆರೋಪಿ ರವಿಯನ್ನ ನೋಡಿರುತ್ತೇವೆ. ಆ ದಿನ ಆರೋಪಿ ಧರಿಸಿದ್ದ ಬಟ್ಟೆಯ ಬಣ್ಣ ಹೇಳಲು ಬರುವುದಿಲ್ಲ. ಆರೋಪಿಯ ಮನೆಯ ಸುತ್ತ ಬೇಲಿ ಹಾಕಿರುವುದಿಲ್ಲ. ಜಗುಲಿ ಸಿಮೆಂಟ್ ದ್ದಾಗಿದ್ದು ಅದನ್ನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ, ಸದರಿ ಜಗುಲಿಯ ಅಳತೆ ಗೊತ್ತಿಲ್ಲ.

**3.**ಃ ನಾವು ದಿಃ **04-04-2018** ರಂದು ಶಿವನೇನಹಳ್ಳಿ ದೊಮ್ಮರಟ್ಟಿ ಗ್ರಾಮಕ್ಕೆ ಯಾವುದೇ ದಾಳಿಗೆ ಹೋಗಿಲ್ಲ ಎಂದರೆ ಸರಿಯಲ್ಲ. ಆರೋಪಿ ಮನೆ ಜಗಲಿ ಮೇಲೆ ಟೆಟ್ರಾ ಪ್ಯಾಕೇಟ್ ಗಳನ್ನು ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಶಿವನೇನಹಳ್ಳಿ ಗ್ರಾಮದಲ್ಲಿ ಯಾವುದೇ ಮನೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ದಮ್ಮರಹಟ್ಟಿ ಗ್ರಾಮಕ್ಕೆ ಸೇರಿದವರಾಗಿದ್ದು ಶಿವನೇನಹಳ್ಳಿ ಗ್ರಾಮಕ್ಕೆ ಸೇರಿದವರಲ್ಲ ಎಂದರೆ ಸರಿಯಲ್ಲ. ನಾವು ಅಂಕಿಅಂಶಗಳಿಗಾಗಿ ಠಾಣೆಯಲ್ಲಿ ಕುಳಿತುಕೊಂಡು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸುಳ್ಳು. ಮು.ಮಾ-**1** ರಿಂದ **3** ಕ್ಕೂ ಆರೋಪಿಗೂ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಇಲಾಖಾ ಅಂಕಿಅಂಶಗಳಿಗಾಗಿ ಆರೋಪಿ ವಿರುದ್ದ ಸುಳ್ಳು ದೂರು ದಾಖಲು ಮಾಡಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಅಂದರೆ ಸರಿಯಲ್ಲ.
**ಮರು ವಿಚಾರಣೆಃ** ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ. ಹೇ. ಕೇ. ಸರಿ. ಇದೆ**

**(ಪ್ರಸನ್ನಕುಮಾರ್ ಸಿ.)**
**ಸಿವಿಲ್ ನ್ಯಾಯಾಧೀಶರು ಹಾಗೂ**
**ಜೆ.ಎಂ.ಎಫ್.ಸಿ. ಬೇಲೂರು.**

Case called.

Accused absent. EP filed allowed.

CW-2 present. Examined as PW-2 . PW-2 cross examined by Advocate for Accused.

The L/APP submits that and also in view of repetition of evidence, CW-3 is given up.

Issue W/s to CW-4 to 6.

R/by 07-10-2023

**Civil Judge and JMFC,**
**Belur.**